ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

6

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 4/2/21

# ಗಮನ ಸೆಳೆದ ಮರಿತಿಬ್ಬೇಗೌಡ

ವಿಧಾನ ಪರಿಷತ್‌ನಲ್ಲಿ ಬುಧವಾರ ಖಾಸಗಿ ವಿವಿ ವಿಧೇಯಕ ಮಂಡನೆ ವಿಚಾರ ಸೇರಿದಂತೆ ಪ್ರಶ್ನೋತ್ತರ, ಶೂನ್ಯವೇಳೆಯಲ್ಲಿ ಜೆಡಿಎಸ್‌ನ ಮರಿತಿಬ್ಬೇಗೌಡ ಅವರು ಸಕ್ರಿಯವಾಗಿ ಪಾಲ್ಗೊಂಡು ಗಮನ ಸೆಳೆದರು.



ಪ್ರಶ್ನೋತ್ತರ ಸಂದರ್ಭದಲ್ಲಿ ಮೈಸೂರು–ಬೆಂಗಳೂರು ನಡುವಿನ ಹತ್ತುಪಥದ ರಸ್ತೆ ಸಂಬಂಧ ವಿಶೇಷ ಗಮನ ಸೆಳೆದರೆ, ಶೂನ್ಯವೇಳೆಯಲ್ಲಿ ವರ್ಗೀಕರಣಗೊಂಡ ಕಾಲೇಜು ಉಪನ್ಯಾಸಕರ ವೇತನ ಸಂಬಂಧಿಸಿದಂತೆ ಮಾಹಿತಿ ಸಹಿತ ಮಾತನಾಡಿದರು.

ಮಧ್ಯಾಹ್ನದ ಕಲಾಪದಲ್ಲಿ ಖಾಸಗಿ ವಿವಿಗಳ ವಿಧೇಯಕಕ್ಕೆ ಸಂಬಂಧಿಸಿದಂತೆ, ಸುದೀರ್ಘ ಮಾತನಾಡಿ, ಖಾಸಗಿ ವಿವಿಗಳನ್ನು ಆರಂಭಿಸುವ ಮೊದಲು ರಾಜ್ಯದ ವಿಶ್ವವಿದ್ಯಾಲಯ ಹಾಗೂ ಸರ್ಕಾರಿ ಕಾಲೇಜುಗಳನ್ನು ಉನ್ನತೀಕರಿಸುವ ಜತೆಗೆ, ಗುಣಮಟ್ಟ ಸುಧಾರಣೆಯ ಕಾರ್ಯ ಮಾಡಬೇಕು. ರಾಜ್ಯದ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಬೋಧಕರ ಕೊರತೆಯಿದೆ. ಖಾಸಗಿ ವಿವಿಗಳಿಗೆ ಮಿತಿ ನೀಡದೇ, ರಾಜ್ಯವ್ಯಾಪಿ ಸಂಶೋಧನಾ ಕೇಂದ್ರ, ಘಟಕ ಕಾಲೇಜು ತೆರೆಯಲು ಅನುಮತಿ ನೀಡಿದರೇ, ಸರ್ಕಾರಿ ಕಾಲೇಜುಗಳ ಕತ್ತು ಹಿಸುಕಿಹಾಕಿದಂತಾಗುವುದಿಲ್ಲವೇ ಎಂದು ಪ್ರಶ್ನಿಸಿದರು. ಖಾಸಗಿ ವಿವಿಗಳಿಗೂ ಐದು ಕಿ.ಮೀ. ಮಿತಿ ಹೇರಬೇಕು ಮತ್ತು ಅಲ್ಲಿನ ಆಡಳಿತ ಮಂಡಳಿಯಲ್ಲಿ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರಿಗೆ ಅವಕಾಶ ನೀಡಬೇಕು ಎಂದು ಪ್ರತಿಪಾದಿಸುವ ಮೂಲಕ ಸದನದ ಗಮನ ಸೆಳೆದರು.